ಮೀನು ಹಿಡಿಯಲು ಹುಟ್ಟು ಹಾಕುತ್ತ ಬರುವ ಸಣ್ಣ ದೋಣಿಗಳಿಗೆ ಮಾತ್ರ ಡ್ರೈವರ್ ಬೋಟಿನ ವೇಗವನ್ನು ತಗ್ಗಿಸುತ್ತಿದ್ದ.

ದಡ ಕಿರಿದಾಗುವ ಜಾಗಗಳಲ್ಲಿ, ಎಮ್ಮೆ ಮೇಯಿಸುವ ಹುಡುಗರು ನದಿ ಆಳವಿಲ್ಲದ ಕಡೆ ಈಜಾಡುತ್ತಿದ್ದರು. ದಂಡೆಯ ಮರಳಲ್ಲಿ ಅರೆ ಬೆತ್ತಲೆಯಾಗಿ ಹೊರಳಾಡುತ್ತಾ ಆಟವಾಡುತ್ತಿದ್ದ ಮತ್ತಷ್ಟು ಹುಡುಗರು. ಇವರೆಲ್ಲಾ ಗುಡ್ಡಗಾಡಿನ ಮಕ್ಕಳಿರಬೇಕು. ಯಾವ ಕಟ್ಟುನಿಟ್ಟುಗಳು ಇಲ್ಲದೆ, ಸ್ವತಂತ್ರವಾಗಿ ಆಟವಾಡುತ್ತಿದ್ದರು. ದಟ್ಟವಾದ ಕಾಡು, ತುಂಬಿ ಹರಿಯುತ್ತಿರುವ ನದಿ, ಪಕ್ಷಿಗಳ ಕಲರವ, ಮತ್ಸ್ಯಗಂಧಿಯರಂತೆ ಮೀನುಗಳು, ನೀರಲ್ಲಿ ಮೀಯುವ ಎಮ್ಮೆಗಳು, ಹಣ್ಣು ಹಂಪಲು, ಹೂಗಳು, ಬಿಸಿಲು, ಗಾಳಿ, ನದಿಯ ಮೇಲೆ ನಕ್ಷತ್ರಗಳಂತೆ ಹೊಳೆವ ಸೂರ್ಯ ಕಿರಣಗಳು, ಯಾವ ಹಂಗೂ ಇಲ್ಲದ ಬದುಕು.

ತಮನ್ ನೆಗಾರ ಬಂದು ತಲುಪಿದಾಗ ಮಧ್ಯಾಹ್ನ 12.45 ಆಗಿತ್ತು. ಬಿಸಿಲು ನೆತ್ತಿಗೇರಿತ್ತು. ಕಣ್ಣು ಕೋರೈಸುತ್ತಿತ್ತು. ಅವರವರ ಲಗೇಜುಗಳನ್ನು ತೆಗೆದುಕೊಂಡು ಬೋಟಿನಿಂದ ಇಳಿದೆವು. ಗೋವಾದಲ್ಲಿರುವಂತೆ ಇಲ್ಲೂ ಬೈಕ್ ಟ್ಯಾಕ್ಸಿಗಳಿದ್ದವು. ನಾನು ಹೋಟೆಲಿನ ವಿಳಾಸ ಹೇಳಿದಾಗ, ಎರಡು ರಿಂಗಿಟ್ ಎಂದ. ಚೌಕಾಸಿ ಮಾಡದೆ ಹತ್ತಿಕೊಂಡೆ. ಸೂಟ್‌ಕೇಸ್, ಕ್ಯಾಮೆರಾ ಚೀಲ ಎರಡನ್ನೂ ಹಿಡಿದುಕೊಂಡು ಹತ್ತಲು ಶ್ರಮವಾಯಿತು. ಅವನು ಸೂಟ್‌ಕೇಸ್‌ನ್ನು ಪೆಟ್ರೋಲ್ ಟ್ಯಾಂಕ್ ಮೇಲೆ ಇಟ್ಟುಕೊಂಡ. ಹೋಟೆಲ್ ತಲುಪಲು 10ನಿಮಿಷ ಬೇಕಾಯಿತು. ಬಂದಿಳಿದ ಕೂಡಲೇ ಟ್ರಾವೆಲ್ ಏಜೆಂಟ್ ಕೊಟ್ಟ ಕಾಗದಗಳನ್ನು ರಿಸೆಪ್ಷನಲ್ಲಿ ಕೊಟ್ಟಾಗ ಅಲ್ಲಿದ್ದ ಹೆಣ್ಣು ಮುಗುಳ್ನಗುತ್ತ, ವೆಲ್ಕಮ್ ಸರ್ ಎಂದು ಹೇಳಿ, ವೆಲ್ಕಮ್ ಡ್ರಿಂಕ್ ತರಿಸಿದಳು. ರೂಮಿನ ಬೀಗದಕೀಯೊಂದಿಗೆ ಲಗ್ಗೇಜ್ ತೆಗೆದುಕೊಂಡು ಹೋದ ರೂಂ ಬಾಯನ್ನು ಹಿಂಬಾಲಿಸಿದೆ. ರೋ ಹೌಸುಗಳಂತ ಸಣ್ಣ ಸಣ್ಣ ಕಾಟೇಜುಗಳ ಮುಂದೆ ಬಣ್ಣಬಣ್ಣದ ಹೂಗಳ ಪುಟ್ಟ ತೋಟಗಳು ಸುಂದರವಾಗಿದ್ದವು.

★★★

ರೂಮಿಗೆ ಬಂದವನು ನಿದ್ದೆ ಹೋದೆ. ಎದ್ದಾಗ ಆಗಲೇ ಸಂಜೆ 7.30 ಆಗಿತ್ತು. ಮಧ್ಯಾಹ್ನ ಏನೂ ತಿಂದಿರಲಿಲ್ಲ. ಹಸಿವಾಯಿತು. ಬೇಗ ಊಟ ಮುಗಿಸಿ ಮಲಗುವ, ಬೆಳಗ್ಗೆ 6 ಗಂಟೆಗೆ 'ಫಾರೆಸ್ಟ್ ವಾಕ್'ಗೆ ತಯಾರಾಗಬೇಕು. ಫ್ರೆಶ್ ಆಗಿ, ಜೀನ್ಸ್ ಟೀ ಶರ್ಟ್ ತೊಟ್ಟು ರೆಸ್ಟಾರಂಟಿಗೆ ಬಂದು ಒಂದು ಮೂಲೆಯ ಟೇಬಲ್ ಹುಡುಕಿ ಕುಳಿತೆ. ಬಿಯರ್, ಮಶ್ರೂಮ್ ಪೆಪ್ಪರ್ ಫ್ರೈ ಆರ್ಡರ್ ಮಾಡಿ ಊಟ ಆಮೇಲೆ ಹೇಳುವುದಾಗಿ ಹೇಳಿ, ಬಿಯರ್ ಕುಡಿಯುತ್ತಾ ಕುಳಿತಿದ್ದಾಗ,

**'May I join you'** ಧ್ವನಿ ಕೇಳಿಸಿತು.

★★★

ಮಾರನೆಯ ದಿನ ಬೆಳಗ್ಗೆ ಫಾರೆಸ್ಟ್ ವಾಕಿಗೆ ತಯಾರಾಗಿ ಬೆಳಗಿನ ಕಾಫಿ ಕುಡಿಯಲು ರೆಸ್ಟಾರಂಟಿಗೆ ಬಂದಾಗ ಕಡುನೀಲಿ ಟ್ರ್ಯಾಂಕ್ ಪ್ಯಾಂಟ್, ಬೂದು ಬಣ್ಣದ ಸ್ವೆಟ್ ಜಾಕೆಟ್ಟಿನಲ್ಲಿ ಬಿಸಿ ಕಾಫೀ ಹೀರುತ್ತಾ ಕುಳಿತಿದ್ದಳು ವೆರೋನಿಕ. ನನ್ನನ್ನು ನೋಡಿ ಕೈಯಾಡಿಸಿ 'ಗುಡ್ ಮಾರ್ನಿಂಗ್' ಹೇಳಿ ಅವಳ ಎದುರಿನ ಕುರ್ಚಿಯನ್ನು ತೋರಿಸಿ ಬಾ ಎಂದು ಸನ್ನೆ ಮಾಡಿದಳು. ಹೋಗಿ ಕುಳಿತಾಗ **'So, had a good sleep'** ಎಂದಳು. **'yes'** ಎಂದವನು ಕಾಫೀ ಹೀರುತ್ತಾ **'going for forest walk'** ಎಂದೆ. ಅವಳು **'me too'** ಎಂದಾಗ ನನ್ನ ಎದೆಯ ಬಡಿತ ಹೆಚ್ಚಾಯಿತು.

★★★